**ಶ್ರೀ ಎಸ್. ಮುನಿರಾಜು :** 41ನೇ ವಾರ್ಡ್‌ನಲ್ಲಿ ತೆರವುಗೊಳಿಸಿದ್ದೇವೆಂದು ಹೇಳಿದರು. ಹೋದ ಸಾರಿ ಒಬ್ಬ ಮೃತನಾದ. ಆ ಪಾರ್ಟ್ ಮಾತ್ರ ಅಂದರೆ 200–300 ಮೀಟರ್ ಮಾತ್ರ ತೆರವುಗೊಳಿಸಿದ್ದಾರೆ. ಸಂಪೂರ್ಣ ತೆರವುಗೊಳಿಸಲಿಲ್ಲ. ಅದಕ್ಕೆ ಅದನ್ನೂ ಸೇರಿಸಿ ತೆರವುಗೊಳಿಸಬೇಕು.

**ಶ್ರೀ ಸಿದ್ದರಾಮಯ್ಯ :** ಯಾವ್ಯಾವುದು ತೆರವುಗೊಳಿಸಬೇಕು ಅದೆಲ್ಲವನ್ನೂ ತೆರವುಗೊಳಿಸುತ್ತೇವೆ.

**ಅಧ್ಯಕ್ಷರು :** ಆಯಿತು ಬಿಡಿ. ಟೈಂ ಆಯಿತು ಸಾಕು ಬಿಡಿ, ಹ್ಯಾರಿಸ್ ನೀವು ಕೇಳಿ.

## ಕಸ ವಿಲೇವಾರಿ ವ್ಯವಸ್ಥೆ

**18 (256) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) :–** ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸುವ್ಯವಸ್ಥಿತ ಶಾಶ್ವತ ಕಸ ವಿಲೇವಾರಿಗಾಗಿ ಕೈಗೊಂಡ ಕ್ರಮಗಳೇನು; ಪ್ರಸ್ತುತ ಇರುವ ತ್ಯಾಜ್ಯ ವಿಲೇವಾರಿ ಘಟಕಗಳು ಯಾವುವು;

(ಆ) ಕಸದ ಒಟ್ಟು ಪ್ರಮಾಣ ಮತ್ತು ಅವುಗಳನ್ನು ನಿರ್ವಹಿಸುವಲ್ಲಿ ಅನುಸರಿಸುತ್ತಿರುವ ವಿಧಾನಗಳೇನು; ದೇಶ ಮತ್ತು ವಿದೇಶಗಳಲ್ಲಿ ಕಸ ವಿಲೇವಾರಿಗೆ ಅನುಸರಿಸುತ್ತಿರುವ ಆಧುನಿಕ ವಿಧಾನಗಳನ್ನು ಬಳಕೆ ಮಾಡಿಕೊಳ್ಳಲು ಇರುವ ಸಮಸ್ಯೆಗಳೇನು;

(ಇ) ಕಸದಿಂದ ಜೈವಿಕ ಗೊಬ್ಬರ ಮತ್ತು ಇಂಧನ ಉತ್ಪಾದಿಸುವ ಕುರಿತು ಯಾವ ಕ್ರಮಗಳನ್ನು ಜರುಗಿಸಲಾಗಿದೆ; ನೂತನ ತಂತ್ರಜ್ಞಾನದ ಬಳಕೆಗಾಗಿ ರೂಪಿಸಿರುವ ಕ್ರಿಯಾ ಯೋಜನೆಗಳು ಯಾವುವು?

**ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) :–**

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುತ್ತಿರುವ ಘನತ್ಯಾಜ್ಯವನ್ನು ವೈಜ್ಞಾನಿಕ ಸಂಸ್ಕರಿಸಲು ಪಾಲಿಕೆಯ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

(1) ತ್ಯಾಜ್ಯವನ್ನು ಮೂಲದಲ್ಲಿಯೇ ಬೇರ್ಪಡಿಸಿ ಸಂಗ್ರಹಿಸುವ ಕಾರ್ಯಕ್ಕೆ ಒತ್ತು ನೀಡಲಾಗುತ್ತದೆ.

(2) ಒಣತ್ಯಾಜ್ಯದ ಸಮರ್ಪಕ ನಿರ್ವಹಣೆಗೆ – ವಿಕೇಂದ್ರಕೃತ ತ್ಯಾಜ್ಯ ನಿರ್ವಹಣೆಗಾಗಿ 298 ವಾರ್ಡ್‌ಗಳಲ್ಲಿ ಒಣ ತ್ಯಾಜ್ಯ ಸಂಗ್ರಹಣಾ ಕೇಂದ್ರಗಳನ್ನು ನಿರ್ಮಿಸಲಾಗುತ್ತಿದೆ. ಒಟ್ಟು 145 ಸಂಗ್ರಹಣಾ ಕೇಂದ್ರಗಳು ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದು, ಸದರಿ ಕೇಂದ್ರಗಳನ್ನು ಸರ್ಕಾರೇತರ ಸಂಸ್ಥೆಗಳಿಗೆ ನೀಡಲಾಗಿದ್ದು, ಮನೆಗಳಲ್ಲಿ ಉತ್ಪತ್ತಿಯಾಗುವ ಒಣ ತ್ಯಾಜ್ಯ, ಇ–ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ, ಶೇಖರಿಸಲು ಹಾಗೂ ವೈಜ್ಞಾನಿಕವಾಗಿ ಸಂಸ್ಕರಿಸುವ ಸಂಸ್ಥೆಗಳಿಗೆ ನೀಡಲು ಕ್ರಮ ಜರುಗಿಸಲಾಗಿದೆ.

(3) ಹಸಿ ತ್ಯಾಜ್ಯ ಸಂಸ್ಕರಣೆಗಾಗಿ 5 ಟನ್ ಸಾಮರ್ಥ್ಯದ 16 ಬಯೋ ಮಿಥನೈಸೇಷನ್ ಕೇಂದ್ರಗಳನ್ನು ನಿರ್ಮಿಸಲಾಗುತ್ತಿದೆ. ಈಗಾಗಲೇ ಒಂದು ಘಟಕದಲ್ಲಿ ಉತ್ಪಾದನೆಯಾಗುತ್ತಿರುವ ಅನಿಲದಿಂದ ವಿದ್ಯುತ್ ಉತ್ಪಾದಿಸಿ ಕೆಲವು ಬೀದಿ ದೀಪಗಳಿಗೆ ಪೂರೈಸಲಾಗುತ್ತಿದೆ. 2 ಘಟಕಗಳು ಪರೀಕ್ಷ ಪ್ರಯೋಗದಲ್ಲಿರುತ್ತವೆ.

(4) ದೊಡ್ಡ ಪ್ರಮಾಣದ ತ್ಯಾಜ್ಯ ಉತ್ಪಾದಕರನ್ನು (ಹೊಟೇಲ್, ಕಲ್ಯಾಣ ಮಂಟಪಗಳು, ಮಾಲ್‌ಗಳು, ಬಹುಮಹಡಿ ಕಟ್ಟಡಗಳು, ವಿದ್ಯಾ ಸಂಸ್ಥೆಗಳು ಇತ್ಯಾದಿ) ಗುರುತಿಸಿ, ಅವರುಗಳಿಗೆ ತ್ಯಾಜ್ಯವನ್ನು ತಮ್ಮಲ್ಲಿಯೇ ಸಂಸ್ಕರಿಸುವಂತೆ ಉತ್ತೇಜಿಸಲಾಗುತ್ತಿದೆ. ಹಾಗೂ ಸದರಿಯವರಿಂದ ಸಮರ್ಪಕ ತ್ಯಾಜ್ಯ ನಿರ್ವಹಣೆಗಾಗಿ ಪಾಲಿಕೆಗೆ ಆರ್ಥಿಕ ಹೊರೆಯಿಲ್ಲದೆ ಸಾಗಾಣಿಕೆ ಮತ್ತು ಸಂಸ್ಕರಣೆ ಸಂಸ್ಥೆಗಳನ್ನು ಗುರುತಿಸಲು ಕ್ರಮ ಜರುಗಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಈಗಾಗಲೇ ಹೊಟೇಲ್ ಅಸೋಸಿಯೇಶನ್‌ಗಳಿಗೆ 250 ಟನ್ ಹೋಟಲ್ ತ್ಯಾಜ್ಯ ಸಂಸ್ಕರಿಸಲು ಪಾಲಿಕೆಯಿಂದ 5 ಎಕರೆ ಸ್ಥಳವನ್ನು ಉಪಯೋಗತಾ ಬದ್ಧತೆಯೊಂದಿಗೆ (permissive use) ನೀಡಲಾಗಿದೆ.

(5) ಕರ್ನಾಟಕ ಮುನ್ಸಿಪಲ್ ಕಾಯ್ದೆಗೆ 2013 ರಲ್ಲಿ ತಿದ್ದುಪಡಿ ತರಲಾಗಿದೆ. ಅದರಂತೆ ರಸ್ತೆ ಬದಿಗಳಲ್ಲಿ ಮಲ ಮೂತ್ರ ವಿಸರ್ಜನೆ ಮಾಡುವುದು ಒಂದು ಅಪರಾಧವಾಗಿದ್ದು, ಇಂತಹ ಅಪರಾಧಗಳಿಗಾಗಿ ದಂಡಗಳನ್ನು ಸಹ ವಿಧಿಸಿ ನಿಯಂತ್ರಿಸಲು ಕ್ರಮ ಜರುಗಿಸಲಾಗುತ್ತಿದೆ.

(6) ತೋಟಗಾರಿಕೆ ತ್ಯಾಜ್ಯವನ್ನು ಸಂಸ್ಕರಿಸಲು ವಿವಿಧ ಉದ್ಯಾನವನಗಳಲ್ಲಿ ಶ್ರೆಡ್ಡರಗಳನ್ನು ಅಳವಡಿಸಿ ಸಂಸ್ಕರಿಸಲು ಕ್ರಮ ಜರುಗಿಸಲಾಗುತ್ತದೆ.

ಈ ಕೆಳಂಡ ಸ್ಥಳಗಳಲ್ಲಿ ತ್ಯಾಜ್ಯ ವಿಲೇವಾರಿ ಘಟಕಗಳನ್ನು ಸ್ಥಾಪಿಸಲಾಗಿದೆ.

(1) ಕೆ.ಸಿ.ಡಿ.ಸಿ. ಕೂಡ್ಲು ಗೊಬ್ಬರ ತಯಾರಿಕಾ ಘಟಕ.

(2) ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬೆಳವಂಗಳ ಹೋಬಳಿ ಗುಂಡ್ಲಹಳ್ಳಿ ಬಳಿಯ ಮೆ॥ ಟೆರ್ರಾಫಾರ್ಮ ಬಯೋಟೆಕ್ನಾಲಜೀಸ್ ಲಿಮಿಟೆಡ್ ಸಂಸ್ಥೆಯ ಘನತ್ಯಾಜ್ಯ ಸಂಸ್ಕರಣಾ ಘಟಕ.

(3) ಸರ್ವೆ ನಂ. 155, ಮಂಡೂರು ಗ್ರಾಮದಲ್ಲಿನ, ಮೆ॥ ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಲಿಮಿಟೆಡ್ ಸಂಸ್ಥೆಯ ಘನತ್ಯಾಜ್ಯದಿಂದ ಗೊಬ್ಬರ, ಜೈವಿಕ ಅನಿಲ ಮತ್ತು ಜೈವಿಕ ಅನಿಲದಿಂದ ವಿದ್ಯುತ್ ಉತ್ಪಾದಿಸುವ ಘಟಕ.

(4) ಕೆ.ಆರ್. ಮಾರುಕಟ್ಟೆ, ಮತ್ತಿಕೆರೆ ಮತ್ತು ಕುವೆಂಪು ನಗರದಲ್ಲಿ ಪ್ರತಿದಿನ 5 ಟನ್ ಹಸಿ ತ್ಯಾಜ್ಯದಿಂದ ಜೈವಿಕ ಅನಿಲ ಉತ್ಪಾದಿಸುವ ಘಟಕ.

ಮುಂದುವರೆದಂತೆ, ಆಧುನಿಕ ತಂತ್ರಜ್ಞಾನ ಬಳಸಿಕೊಂಡು ತ್ಯಾಜ್ಯದಿಂದ ವಿದ್ಯುತ್/ಗೊಬ್ಬರ ಉತ್ಪಾದಿಸುವ ಘಟಕಗಳನ್ನು ಕೆಳಕಂಡಂತೆ ಸ್ಥಾಪಿಸಲು ಕ್ರಮಕೈಗೊಳ್ಳಲಾಗುತ್ತಿದೆ.

(1) ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡ ಬೆಳವಂಗಲ ಹೋಬಲಿ, ಭಕ್ತರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಗರನಹಳ್ಳಿ ಗಾಮದಲ್ಲಿ ಪ್ರತಿದಿನ 500 ಮೆ. ಟನ್ ಸಂಸ್ಕರಿಸುವ ಸಾಮರ್ಥ್ಯದ ಸಮಗ್ರ ಘನತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆ (ಮೆ॥ ಎಂ.ಎಸ್.ಜಿ.ಪಿ. ಇನ್‌ಫ್ರಾಟೆಕ್ ಪ್ರೈ. ಲಿ. ಸಂಸ್ಥೆಯವರ ಸ್ವಂತ ಜಾಗದಲ್ಲಿ) – ಘಟಕ ಸ್ಥಾಪನೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

(2) ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು, ಗೋರೂರು ಗ್ರಾಮದ ಬಳಿ ಪ್ರತಿದಿನ 1000 ಮೆ.ಟನ್ ಸಂಸ್ಕರಿಸಿ ವಿದ್ಯುತ್ ಉತ್ಪಾದಿಸುವ ಘಟಕ ಸ್ಥಾಪನೆ. (ಮೆ॥ ಸತಾರೆಂ ಎಂಟರ್ ಪ್ರೈಸಸ್)

(3) ಸರ್ವೆ ನಂ. 85 ಕನ್ನಹಳ್ಳಿ, ದಾಸರಹಳ್ಳಿ ವಲಯ ಭಾಗದಲ್ಲಿ, ಪ್ರತಿದಿನ 250 ಮೆ.ಟನ್ ಹಸಿ ತ್ಯಾಜ್ಯ ಸಂಸ್ಕರಿಸುವ ಸಂಸ್ಕರಣಾ ಘಟಕ ಸ್ಥಾಪನೆ. (ಮೆ॥ ಬೃಹತ್ ಬೆಂಗಳೂರು ಹೋಟೆಲ್ ಅಸೋಸಿಯೇಷನ್)

(4) ಸರ್ವೆ ನಂ. 85 ಕನ್ನಹಳ್ಳಿ, ದಾಸರಹಳ್ಳಿ ವಲಯ ಭಾಗದಲ್ಲಿ, ಪ್ರತಿದಿನ 600 ಮೆ.ಟನ್ ಘನತ್ಯಾಜ್ಯ ಸಂಸ್ಕರಿಸುವ ಸಮಗ್ರ ಘನತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪನೆ. (ಮೆ॥ ಎಸ್ಸೆಲ್ ಇನ್‌ಫ್ರಾ ಪ್ರಾಜೆಕ್ಟ್ ಪ್ರೈ. ಲಿಮಿಟೆಡ್)

(5) ಸರ್ವೆ ನಂ. 155, ಮಂಡೂರು ಗ್ರಾಮದಲ್ಲಿನ, ಮೆ॥ ಎಂ.ಕೆ. ಆರೋಮ್ಯಾಟಿಕ್ಸ್ ಸಂಸ್ಥೆಯ ಪ್ಲಾಸ್ಟಿಕ್ ತ್ಯಾಜ್ಯದಿಂದ ಜೈವಿಕ ಇಂಧನ ಉತ್ಪಾದಿಸುವ ಘಟಕ.

(6) ಗಾಂಧಿನಗರ, ಜಯನಗರ, ಬೇಗೂರು, ಕೆ.ಸಿ.ಡಿ.ಸಿ. ಕೂಡ್ಲು, ವರ್ತೂರು, ಲಿಂಗದೀರನಹಳ್ಳಿ, ನಾಗಪುರ, ದೊಮ್ಮಲೂರು, ಕೋರಮಂಗಲ, ಕೆ.ಆರ್.ಪುರ ಮತ್ತು ಎಸ್.ಎಂ.ವಿ. ಲೇಔಟ್‌ನಲ್ಲಿ ಪ್ರತಿದಿನ 5 ಟನ್ ಹಸಿ ತ್ಯಾಜ್ಯದಿಂದ ಜೈವಿಕ ಅನಿಲ ಉತ್ಪಾದಿಸುವ ಘಟಕ–ಘಟಕ ಸ್ಥಾಪನೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

(ಆ) ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ದಿನನಿತ್ಯ ಸರಿಸುಮಾರು 4000 ಮೆ.ಟನ್ ಘನತ್ಯಾಜ್ಯ ಉತ್ಪತ್ತಿಯಗುತ್ತಿದ್ದು, ಹಸಿ ಘನತ್ಯಾಜ್ಯದಿಂದ ಗೊಬ್ಬರ, ಜೈವಿಕ ಅನಿಲ ಹಾಗೂ ಅನಿಲದಿಂದ ವಿದ್ಯುತ್ ಉತ್ಪಾದಿಸುವ ವಿಧಾನವನ್ನು ಅಳವಡಿಸಿ ಘಟಕಗಳನ್ನು ಸ್ಥಾಪಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ವಿದೇಶಗಳಲ್ಲಿರುವ ತಂತ್ರಜ್ಞಾನವನ್ನು ಯಥಾವತ್ತಾಗಿ ಭಾರತ ದೇಶದಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಏಕೆಂದರೆ ಘನತ್ಯಾಜ್ಯದಲ್ಲಿರುವ Calorific value ವಿದೇಶಗಳಲ್ಲಿ ಹೆಚ್ಚಿದ್ದು, ಭಾರತ ದೇಶದಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯದಲ್ಲಿ ಅಷ್ಟೊಂದು Calorific value ಇರುವುದಿಲ್ಲ. ಇದರ ಹೊರತಾಗಿ ಬೇರೆ ಯಾವುದೇ ಸಮಸ್ಯೆಗಳು ಇರುವುದಿಲ್ಲ.

(ಇ) ಈಗಾಗಲೇ ಪಾಲಿಕೆ ವತಿಯಿಂದ ಜೈವಿಕ ಗೊಬ್ಬರ ಮತ್ತು ಇಂಧನ ಉತ್ಪಾದಿಸುವ ಘಟಕಗಳನ್ನು ಸ್ಥಾಪಿಸಲಾಗಿದ್ದು, ವಿವರಗಳನ್ನು ಅಂಶ "ಅ" ನಲ್ಲಿ ನೀಡಲಾಗಿದೆ.

**ಶ್ರೀ ಎನ್.ಎ. ಹ್ಯಾರಿಸ್ :** ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ಇವತ್ತಿಗೂ ಕೂಡ ಬೆಂಗಳೂರು ನಗರದಲ್ಲಿ garbage issue ಹಾಗೆಯೇ ಉಳಿದುಕೊಂಡಿದೆ. ಈ ಬಗ್ಗೆ ಎರಡು ಪುಟಗಳ ಉತ್ತರವನ್ನು ನಮ್ಮ ಅಧಿಕಾರಿಗಳು ಕೊಟ್ಟಿದ್ದಾರೆ. ಆದರೆ, ಇಲ್ಲಿ ನಾವು ಮುಖ್ಯವಾಗಿ ಕಾಣುತ್ತಿರುವುದು ಏನೆಂದರೆ, ಇಲ್ಲಿಂದ garbage ಅನ್ನು ತೆಗೆದುಕೊಂಡು ಹೋಗಿ ಬೇರೆ ಕಡೆಗೆ dump ಮಾಡುವಂಥ ಜಾಗ ಇದೆ.

**ಅಧ್ಯಕ್ಷರು :** ಮಾನ್ಯ ಹ್ಯಾರಿಸ್‌ರವರೇ, ನಿಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಇದೊಂಡು ದೊಡ್ಡ ಪ್ರಶ್ನೆಯಾಗಿರುವುದರಿಂದ ಈ ಬಗ್ಗೆ ಚರ್ಚೆಗೆ ಹಾಕಿಕೊಳ್ಳಿ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) :** ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಅರ್ಧ ಗಂಟೆ ಚರ್ಚೆಗೆ ಹಾಕಿಕೊಳ್ಳಿ.

**ಅಧ್ಯಕ್ಷರು :** ಅರ್ಧ ಗಂಟೆಗೆ ಚರ್ಚೆಗೆ ಹಾಕಿಕೊಂಡರೆ ಈ ಬಗ್ಗೆ ವಿವರವಾಗಿ ಹೇಳುವುದಕ್ಕೆ ಸಾಧ್ಯವಾಗುತ್ತದೆ.

**ಶ್ರೀ ಎನ್.ಎ. ಹ್ಯಾರಿಸ್ :** ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ.

**ಅಧ್ಯಕ್ಷರು :** ಆಯಿತು ಮಾಡೋಣ.

## ಪೊಲೀಸ್ ಠಾಣೆ ತೆರೆಯುವುದು

**21 (261) ಶ್ರೀ ಸುಧಾಕರ ಲಾಲ್ ಪಿ.ಆರ್. (ಕೊರಟಗೆರೆ) :–** ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಕೊರಟಗೆರೆ ಟೌನ್‌ನಲ್ಲಿ ಪೊಲೀಸ್ ಠಾಣಾ ಕಟ್ಟಡವನ್ನು ನಿರ್ಮಿಸಲು ಸೂಕ್ತ ನಿವೇಶನವನ್ನು ಗುರುತಿಸುವಂತೆ ತಹಶೀಲ್ದಾರ್ ಇವರೊಂದಿಗೆ ಸಮಾಲೋಚನೆ ನಡೆಸಲಾಗುತ್ತಿದೆಯೇ; ಹಾಗಿದ್ದಲ್ಲಿ, ಎಲ್ಲಿ ನಿವೇಶನವನ್ನು ಗುರುತಿಸಿ ನೀಡಲಾಗಿದೆ.